# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 1472/24

ಸಿ.ಡಬ್ಲ್ಯು 1

ಪಿ.ಡಬ್ಲ್ಯು 1

| | | |
|---|---|---|
| ಸಾಕ್ಷಿದಾರರ ಹೆಸರು | – | ಮಾರುತಿ ನಾಯ್ಕ |
| ತಂದೆಯ ಹೆಸರು | – | ಅಪ್ಪು ನಾಯ್ಕ |
| ವಯಸ್ಸು | – | 70 ವರ್ಷ |
| ಉದ್ಯೋಗ | – | ನಿವೃತ್ತ ನೌಕರ |
| ವಾಸ್ತವ್ಯ | – | ಕೋಡಿಭಾಗ್, ಕಾರವಾರ ತಾಲೂಕ |

(ಇಂದು ದಿನಾಂಕಃ 10-02-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಮಕ್ಕಳೊಂದಿಗೆ ವಾಸ ಮಾಡುತ್ತಿದ್ದೇನೆ. ನನ್ನ ಮಗ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸದಲ್ಲಿ ಇರುತ್ತಾನೆ. ದಿನಾಂಕ 26-05-2024 ರಂದು ನನ್ನ ಮಗ ಬೆಂಗಳೂರಿನಿಂದ ರಜೆಯ ಮೇಲೆ ಊರಿಗೆ ಬಂದಿದ್ದನು. ದಿನಾಂಕ 01-06-2024 ರಂದು ನಮ್ಮನ್ನು ಕರೆದುಕೊಂಡು ಸಂಜೆ ಬೆಂಗಳೂರಿಗೆ ಹೊರಟಿದ್ದನು. ನಾವು ಹೊರಡುವಾಗ ಮನೆಗೆ ಬೀಗ ಹಾಕಿ ಹೋಗಿದ್ದೆವು. ಮನೆಯಲ್ಲಿ ನನ್ನ ಹೆಂಡತಿಯ ಆಭರಣಗಳಾದ ಬಂಗಾರದ 40 ಗ್ರಾಮ್ ತೂಕದ ಒಂದು ಮಂಗಳಸೂತ್ರ, 30 ಗ್ರಾಮ್ ತೂಕದ ಒಂದು ಬಂಗಾರದ ಸರ, 5 ಗ್ರಾಮ್ ತೂಕದ ಒಂದು ಬಂಗಾರದ ಸರ. 15 ಗ್ರಾಮ ತೂಕದ 2 ಜುಮಕಿ, 2 ಬಂಗಾರದ ಓಲೆ, ಒಟ್ಟೂ 5 ಗ್ರಾಮ್ ತೂಕದ 4 ಬಂಗಾರದ ಉಂಗುರಗಳು ಮತ್ತು 2 ಬಂಗಾರದ ಕೈಬಳೆಗಳು ಹಾಗೂ ನನ್ನ ಮಗ ಮನೆಗೆ ತಂದಿದ್ದ ರೂ. 1,30,000-00 ಹಣವನ್ನು ಕಪಾಟಿನಲ್ಲಿ ಹಾಕಿ ಅದಕ್ಕೆ ಬೀಗ ಹಾಕಿ ಲಾಕರನಲ್ಲಿ ಇಟ್ಟಿದ್ದೆವು. ಮನೆಗೆ ಬೀಗ ಹಾಕಿ ಹೊರಟಿದ್ದೆವು. ದಿನಾಂಕ 29-06-2024 ರಂದು ನನ್ನ ತಮ್ಮ ಕೃಷ್ಣಾನಂದ ನಾಯ್ಕ ನನಗೆ

ಕರೆ ಮಾಡಿ ನಿಮ್ಮ ಮನೆಯ ಮುಂಭಾಗದ ಬೀಗ ಮುರಿದಿದೆ, ಕಪಾಟ ಒಡೆದು ಬಟ್ಟೆ ಚೆಲ್ಲಾಪಿಲ್ಲಿಯಾಗಿದೆ, ಕಳ್ಳತನ ಆಗಿದೆ ಎಂದು ತಿಳಿಸಿದನು. ನಾನು ಬೆಂಗಳೂರಿನಿಂದ ಊರಿಗೆ ಬಂದಿದ್ದು ಮನೆಗೆ ಬಂದು ನೋಡಿದಾಗ ಮನೆಯ ಮುಂಭಾಗದ ಬೀಗ ಮುರಿದಿದ್ದು, ಮಧ್ಯದ ಬಾಗಿಲಿನ ಬೀಗ ಒಡೆದು, ಬೆಡ್ ರೂಮಿನ ಬೀಗ ಒಡೆದು ಬೆಡರೂಮಿನಲ್ಲಿ ಇಟ್ಟ ಕಪಾಟಿನಲ್ಲಿ ಇಟ್ಟ ಒಡವೆ ಮತ್ತು ಹಣ ಇಟ್ಟಿದ್ದ ಕಪಾಟಿನ ಬೀಗ ತೆರೆದಿದ್ದು, ಅದರ ಲಾಕರ್ ಮುರಿದಿದ್ದು ಅದರಲ್ಲಿ ಇಟ್ಟಿದ್ದ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿತ್ತು. ಬಂಗಾರದ ಒಡವೆ ಮತ್ತು ಹಣವನ್ನು ಹುಡುಕಾಡಿದ್ದು ಅದು ಸಿಕ್ಕಿರುವುದಿಲ್ಲ. ನಂತರ ಅದೇ ದಿನ ರಾತ್ರಿ 10.30 ಗಂಟೆಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ ಮಾರನೇ ದಿನ ಅಂದರೆ ದಿನಾಂಕ 01-07-2024 ರಂದು ಬೆಳಿಗ್ಗೆ 8.00 ಗಂಟೆ ಸಮಯಕ್ಕೆ ಪೊಲೀಸರು ಪಂಚನಾಮೆಗೆ ಘಟನಾ ಸ್ಥಳಕ್ಕೆ ಬಂದಿದ್ದರು. ಚಾ.ಸಾ.2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು ಅವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿ, ವಿಡಿಯೋ ಮಾಡಿ, ಪೋಟೊ ತೆಗೆದಿದ್ದರು ಹಾಗೂ ನಕ್ಷೆಯನ್ನು ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ2(ಎ) ಎಂದು ಗುರುತಿಸಲಾಯಿತು.  ಸದರಿ ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಪೋಟೊಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ದಿನಾಂಕ 06-07-2024 ರಂದು ಠಾಣೆಗೆ ಕರೆಸಿದ್ದು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಯನ್ನು ಹಿಡಿದಿದ್ದು ಅವರನ್ನು ತೋರಿಸುವ ಉದ್ದೇಶದಿಂದ ಕರೆದಿದ್ದರು. ನಾನು ಮತ್ತು ನನ್ನ ಹೆಂಡತಿ ಠಾಣೆಗೆ ಹೋಗಿದ್ದು, ಅಲ್ಲಿ ಒಬ್ಬ ವ್ಯಕ್ತಿಯನ್ನು ತೋರಿಸಿದ್ದರು. ಆತನ  ಹೆಸರು ಸಿರಿರಾಜ್ ಖಾನಾಜಿ ಎಂದು ಹೇಳಿದ್ದು ಒಟ್ಟೂ 4 ಜನ ಸೇರಿ ಕಳ್ಳತನ

ಮಾಡಿರುತ್ತಾರೆ. ಉಳಿದವರನ್ನು ಬಂಧಿಸಿದ ನಂತರ ತೋರಿಸುವುದಾಗಿ ಹೇಳಿದ್ದರು. ದಿನಾಂಕ 07-07-2024 ರಂದು ಪುನಃ ಪೊಲೀಸರು ಠಾಣೆಗೆ ಕರೆದಿದ್ದು, ಅಲ್ಲಿ ಒಬ್ಬ ವ್ಯಕ್ತಿ ಇದ್ದು ಆತನ ಹೆಸರು ಅರವಿಂದ ಲಿಂಗಬಸಪ್ಪ ಚೆಲುವಾದಿ ಎಂದು ತಿಳಿಸಿರುತ್ತಾರೆ. ನಂತರ ದಿನಾಂಕ 15-07-2024 ರಂದು ಪುನಃ ಪೊಲೀಸರು ಠಾಣೆಗೆ ಕರೆದಿದ್ದು, ಅಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದು ಆತನ ಹೆಸರು ನೆನಪಿಲ್ಲ.ನಂತರ ದಿನಾಂಕ 18-08-2024 ರಂದು ಪುನಃ ಪೊಲೀಸರು ಠಾಣೆಗೆ ಕರೆದಿದ್ದು, ಅಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದು ಆತನ ಹೆಸರು ನೆನಪಿಲ್ಲ ಅದು ಮುಸ್ಲಿಂ ಹೆಸರು ಆಗಿರುತ್ತದೆ. ಅವರು ನನ್ನ ಮನೆಯಲ್ಲಿ ಕಳ್ಳತನ ಮಾಡಿದ್ದು ಎಂದು ಒಪ್ಪಿಕೊಂಡಿರುತ್ತಾರೆ. ಆ ದಿನ ಪೊಲೀಸ್ ಠಾಣೆಯಲ್ಲಿ ನೋಡಿದ ವ್ಯಕ್ತಿಗಳನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 4 ನೇ ಆರೋಪಿ ಮತ್ತು ವಿ.ಸಿ. ಯಲ್ಲಿ ಹಾಜರುಪಡಿಸಿದ 1 ರಿಂದ 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನನ್ನ ಮನೆಯಲ್ಲಿ ಕಳ್ಳತನ ಮಾಡಿದ ಒಡವೆಗಳನ್ನು ಆರೋಪಿತರು ಕುಂದಾಪುರದ ಒಬ್ಬ ಅಕ್ಕಸಾಲಿಗನಿಗೆ ಮಾರಿದ್ದಾಗಿ ಆತ ಆ ಆಭರಣಗಳನ್ನು ಕರಗಿಸಿ ಗಟ್ಟಿಯನ್ನು ಮಾಡಿರುತ್ತಾರೆ. ಆ ಬಂಗಾರದ ಗಟ್ಟಿಯನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುವುದಾಗಿ ತಿಳಿಸಿ ಅದನ್ನು ನನಗೆ ತೋರಿಸಿರುತ್ತಾರೆ. ಅದು ಸುಮಾರು 8 ತೊಲೆ ಇದೆ ಎಂದು ತಿಳಿಸಿರುತ್ತಾರೆ. ಹಣ ಸಿಕ್ಕಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನನ್ನ ಮನೆಯಲ್ಲಿ ಕಳ್ಳತನ ಮಾಡಿದ ಒಡವೆಗಳನ್ನು ಕರಗಿಸಿ ಗಟ್ಟಿಯನ್ನಾಗಿ ಮಾಡಿದ ಬಂಗಾರವನ್ನು ನಾನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಹಿರಿಯ ಸ.ಸ.ಅ. ರವರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ